ಶ್ರೀ ಕೆ. ಬಿ. ಶಾಣಪ್ಪ.—೧೯೮೪-೮೫ರಲ್ಲಿ ಬರಬೇಕಾದ ಬಾಡಿಗೆ ಎಷ್ಟು ಎಂದು ಕೇಳಿದರೆ ನೀವು ಗುತ್ತಿಗೆಯಿಂದ ಬರಬೇಕಾದುದನ್ನು ಹೇಳಿದ್ದೀರಿ. ಗುತ್ತೇದಾರರಿಂದ ಬರಬೇಕಾದ ಹಣ ಎಷ್ಟು ಎಂದರೆ ಎಷ್ಟು ಮಂದಿಯಿಂದ ಹಣ ಬರಬೇಕಾಗಿದೆ ಎಂದು ಹೇಳಿದ್ದೀರಿ. ೮೪-೮೫ರಲ್ಲಿ ಯಾರ್ಯಾರಿಂದ ಎಷ್ಟೆಷ್ಟು ಹಣ ಬರಬೇಕೆಂದು ಕೇಳುತ್ತೇನೆ.

ಶ್ರೀ ರಮೇಶ ಜಗಜಿಣಗಿ.—೧೯೮೪-೮೫ರಲ್ಲಿ ೧೯ ಕೋಟಿ ರೂಪಾಯಿಗಳಷ್ಟು ಬಾಕಿ ಬರಬೇಕು. ಅದರಲ್ಲಿ ೯.೧೧ ಕೋಟಿ ರೂಪಾಯಿಗೆ ಕೋರ್ಟಿನಿಂದ ತಡೆಯಾಜ್ಞೆಯಾಗಿದೆ. ೨ ಕೋಟಿ ರೂಪಾಯಿ ಬ್ಯಾಂಕ್ ಗ್ಯಾರಂಟಿಯಲ್ಲಿ ತೊಡಗಿದೆ. ೨೧ ಲಕ್ಷ ರೂಪಾಯಿ ರೆವಿನ್ಯೂ ಡಿಪಾಸಿಟ್‌ನಲ್ಲಿದೆ. ೨ ಕೋಟಿ ರೂಪಾಯಿ ಹೆಚ್. ದಾಸಪ್ಪ ಮತ್ತು ಕಂಪನಿಯಿಂದ ಬರಬೇಕಾಗಿದೆ, ಸಿಂಧ್ಯರಿಂದ ೨.೧೨ ಕೋಟಿ, ಎಸ್. ಬಿ. ಗೌಡಯ್ಯನಿಂದ ೨.೦೫ ಕೋಟಿ ಸಿ.ವಿ. ರಾಜಪ್ಪನಿಂದ ೦.೭೧ ಲಕ್ಷ, ಲಕ್ಷ್ಮಣರಾವ್‌ನಿಂದ ೧ ಕೋಟಿ ೮ಲಕ್ಷ ರಾಜಪಲ್ಲಯ್ಯನಿಂದ ೫೭ಲಕ್ಷ, ಶೆಟ್ಟಿಯಿಂದ ೨೭ ಲಕ್ಷ, ನಾಗರಾಜ್‌ನಿಂದ ೨೭ ಲಕ್ಷ ದುರ್ಗ ಮತ್ತು ಕಂಪನಿಯಿಂದ ೧೮ ಲಕ್ಷ ರೂಪಾಯಿ ಬರಬೇಕಾಗಿದೆ. ಯಾವ ಯಾವ ಕಂಟ್ರಾಕ್ಟರಂಗಳು ಎಷ್ಟೆಷ್ಟು ಹಣ ವನ್ನು ಕೊಡಬೇಕೆಂಬ ಪಟ್ಟಿಯನ್ನು ಕೊಡಬೇಕೆಂದು ಕೇಳಿದ್ದಾರೆ. ಆ ಪಟ್ಟಿಯನ್ನು ನಾಳೆ ಕಳುಹಿಸಿ ಕೊಡುತ್ತೇನೆ.

ಶ್ರೀ ವಿ.ರಂಗದೇವರಾಯಲು.—(ಸದಸ್ಯರು ಹಾಜರಿರಲಿಲ್ಲ)

ಶಿವಸಮುದ್ರಂ ಜಲವಿದ್ಯುತ್ ಕೇಂದ್ರದಲ್ಲಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿ ಬಗ್ಗೆ

೧೮೫೫. ಶ್ರೀ ಎಸ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ವಿದ್ಯುಚ್ಛಕ್ತಿ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಶಿವಸಮುದ್ರಂ ಜಲವಿದ್ಯುತ್ ಕೇಂದ್ರದಲ್ಲಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿ ಪ್ರಮಾಣ ಎಷ್ಟು ?

ಆ) ಇದಕ್ಕಾಗಿ ತಗಲುವ ವೆಚ್ಚ ಮತ್ತು ಬರುವ ಆದಾಯ ಎಷ್ಟು ?

ಇ) ಶಿವಸಮುದ್ರಂ ಜಲ ವಿದ್ಯುತ್ ಕೇಂದ್ರದಿಂದ ಕೋಲಾರದ ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ ಸಂಸ್ಥೆಗೆ ವಿದ್ಯುತ್ ಪೂರೈಕೆಯನ್ನು ನಿಲ್ಲಿಸಲಾಗುವುದು ನಿಜವೇ, ಹಾಗಿದ್ದಲ್ಲಿ ಇದರಿಂದ ೧೬,೦೦೦ ಕಾರ್ಮಿಕರು ಹಾಗೂ ಕಾರ್ಮಿಕ ಕುಟುಂಬದವರು ತೊಂದರೆ ಗೀಡಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಶಿವಸಮುದ್ರಂ ಜಲವಿದ್ಯುತ್ ಕೇಂದ್ರವನ್ನು ಮುಚ್ಚುವ ತೀರ್ಮಾನವನ್ನು ಸರ್ಕಾರದವರು ಕೈಗೊಂಡಿರುವುದು ನಿಜವೆ ?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಶಿವಸಮುದ್ರಂ ಜಲವಿದ್ಯುತ್ ಕೇಂದ್ರದಲ್ಲಿ ದಿನವಹಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯ ಪ್ರಮಾಣ ಸರಾಸರಿ ೦.೩೮ ದಶಲಕ್ಷ ಯೂನಿಟ್ಟುಗಳು.

ಆ) ಇಲ್ಲಿ ಒಂದು ಯೂನಿಟ್ಟು ವಿದ್ಯುಚ್ಛಕ್ತಿ ಉತ್ಪಾದನೆಗೆ ತಗಲುವ ವೆಚ್ಚ ಹಾಲಿ ಸಮಾರು ೦೨.೯೬ ಪೈಸೆ. ಮಂಡಳಿಗೆ ಒಂದು ಯೂನಿಟ್ಟಿಂದ ಹಾಲಿ ಬರುತ್ತಿರುವ ಆದಾಯ ೫೪.೬೪ ಪೈಸೆ.

ಇ) ಶಿವಸಮುದ್ರಂ ಘಟಕದಲ್ಲಿರುವ ಯಂತ್ರೋಪಕರಣಗಳು ಈಗಾಗಲೇ ಐವತ್ತು ವರ್ಷಕ್ಕಿಂತಲೂ ಮೇಲ್ಪಟ್ಟು ದೀರ್ಘಾವಧಿ ಕಾಲ ಸೇವೆ ಸಲ್ಲಿಸಿ ಹಳೆಯದಾಗಿವೆ. ಮೇಲಾಗಿ ಇವು ಇಪ್ಪತ್ತೈದು ಸೈಕಲ್ ವಿದ್ಯುತ್ತನ್ನು ಉತ್ಪಾದಿಸುವ ಯಂತ್ರಗಳು. ಈಗ ಹಾಲಿ ಎಲ್ಲೆಡೆಗಳಲ್ಲೂ ಐವತ್ತು ಸೈಕಲ್ ವಿದ್ಯುತ್ ಬಳಕೆಯಲ್ಲಿದ್ದು ಈ ವಯಸ್ಸಾದ ಯಂತ್ರಗಳನ್ನು ದೀರ್ಘಾವಧಿ ಕಾಲ ಮುಂದೆ ನಡೆಸುವುದು ಶಕ್ಯವಲ್ಲ.

ಕಬಿನಿ ಜಲಾಶಯದ ನೀರಾವರಿ ಬಳಕೆ ಮತ್ತು ಕಾವೇರಿ ಬೇಸಿನ್ ಪ್ರಾಜೆಕ್ಟ್‌ಗಳು ಪೂರ್ಣಗೊಂಡಲ್ಲಿ ವಿದ್ಯುತ್ ಉತ್ಪಾದನೆಗೆ ನೀರಿನ ಅಭಾವ ಉಂಟಾಗಬಹುದೆಂದು ತಿಳಿದು ಬಂದಿದೆ. ಅಂತಹ ಸಂದರ್ಭದಲ್ಲಿ ಘಟಕ ಮುಚ್ಚುವ ಸಾಧ್ಯತೆ ಇದೆ.

ಈ) ಶಿವಸಮುದ್ರಂ ಜಲವಿದ್ಯುತ್ ಕೇಂದ್ರವನ್ನು ಮುಚ್ಚುವ ಬಗ್ಗೆ ಇನ್ನು ಯಾವ ತೀರ್ಮಾನವನ್ನೂ ಸರ್ಕಾರ ಕೈಗೊಂಡಿಲ್ಲ.

ಶ್ರೀ ಬಿ. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ನಾನು ಶಿವಸಮುದ್ರಂ ಜಲ ವಿದ್ಯುತ್ ಕೇಂದ್ರದಲ್ಲಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿ ಎಷ್ಟು ಎಂದು ಕೇಳಿದ್ದೆ. ಮತ್ತು ಅದಕ್ಕೆ ತಗಲುವ ವೆಚ್ಚ ಹಾಗೂ ಬರುವ ಆದಾಯದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು ಮಂತ್ರಿಗಳು ಒಂದು ಯೂನಿಟ್ಟಿಗೆ ತಗಲುವ ವೆಚ್ಚ ಹಾಗೂ ಆದಾಯದ ವೆಚ್ಚವನ್ನು ಕೊಟ್ಟಿದ್ದಾರೆ. ಅದು ಅಲ್ಲದೇ ಕೇಂದ್ರ ಸರ್ಕಾರದ ಒಂದು ಚಾರಿ ಕಮಿಟಿಯನ್ನು ನೇಮಕ ಮಾಡಿತ್ತು. ಭಾರತ್ ಗೋಲ್ಡ್ ಮೈನ್ಸ್‌ನಲ್ಲಿ ೧೬ ಕೋಟಿ ರೂಪಾಯಿ ನಷ್ಟ ಆಗಿರುವ ವಿಷಯದಲ್ಲಿ ಈ ಚಾರಿ ಕಮಿಟಿಯವರು ತಮ್ಮ ವರದಿಯಲ್ಲಿ ಕೊಟ್ಟಿದ್ದಾರೆ. ೬೧ ಪೈಸೆ ಯೂನಿಟ್ಟಿಗೆ ಕರ್ನಾಟಕ ಸರ್ಕಾರಕ್ಕೆ ನಾವು ಕೊಡುತ್ತಿದ್ದೇವೆ. ಆದರೆ ಮಾನ್ಯ ಮಂತ್ರಿಗಳು ಇವತ್ತು ೫೪.೬೪ ಪೈಸೆ ಒಂದು ಯೂನಿಟ್ಟಿಗೆ ಖರ್ಚು ತಗಲುತ್ತದೆ ಎಂಬುದಾಗಿ ಕೊಟ್ಟಿದ್ದಾರೆ. ಅದೇ ರೀತಿ ಚಾರಿ ಕಮಿಟಿಯವರು ಹೇಳಿದ್ದಾರೆ. ಇವತ್ತಿನ ಸಂದರ್ಭದಲ್ಲಿ ೧೬ ಸಾವಿರ ಜನ ಕೆಲಸದ ಪ್ರಶ್ನೆ. ಕೋಲಾರ ಗೋಲ್ಡ್ ಫೀಲ್ಡ್‌ನ ಕಾರ್ಮಿಕರ ಪ್ರಶ್ನೆ ಸಂಪೂರ್ಣವಾಗಿ ಭಾರತ್‌ಗೋಲ್ಡ್ ಮೈನ್ಸನ್ನು ಮುಚ್ಚುವಂಥ ಪರಿಸ್ಥಿತಿ ಬಂದಿದೆ. ಅದೇ ವಿಷಯದಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡದೆ ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ನೀವು ನೇರವಾಗಿ ಪ್ರಶ್ನೆ ಕೇಳಿ ಯಾವ ರೀತಿ ಉತ್ತರ ಕೊಡಬೇಕೋ ಆ ರೀತಿ ಕೇಳಿ.

ಶ್ರೀ ಬಿ. ಎಂ. ಅಡ್ಯಂತಾಯ.—ಕೆ.ಜಿ.ಎಫ್.ನ ಪ್ರಶ್ನೆಯನ್ನು ನಾನು ಕೇಳಿದ್ದೆ. ಶಿವಸಮುದ್ರಂ ಜಲ ವಿದ್ಯುತ್ ಕೇಂದ್ರದಿಂದ ಕೋಲಾರ ಗೋಲ್ಡ್ ಮೈನ್ಸ್ ವಿದ್ಯುತ್ ಪೂರೈಕೆಯನ್ನು ನಿಲ್ಲಿಸುವುದು ಇದೆಯೇ ? ಹಾಗಿದ್ದಲ್ಲಿ ಇದರಿಂದ ೧೬,೦೦೦ ಕಾರ್ಮಿಕರು ಹಾಗೂ ಕಾರ್ಮಿಕ ಕುಟುಂಬದವರು ತೊಂದರೆಗೀಡಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುದನ್ನು ಕೇಳಿದ್ದೆ. ಮಂತ್ರಿಗಳು ಯಾವ ರೀತಿ ಉತ್ತರವನ್ನು ಕೊಟ್ಟಿಲ್ಲ. ಚಾರಿ ಕಮಿಟಿಯವರು ಕ್ಲಿಯರ್ ಆಗಿ ಕೊಟ್ಟಿದ್ದಾರೆ. ಕರ್ನಾಟಕ ಸರ್ಕಾರದವರು ಭಾರತ ಗೋಲ್ಡ್ ಮೈನ್ಸ್‌ಗೆ ವಿದ್ಯುತ್ ಕೊಡುವುದಕ್ಕಾಗುವುದಿಲ್ಲ ಎಂದು ಕಾಗದವನ್ನು ಬರೆದಿದ್ದಾರೆ. ಇದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆ. ಅಲ್ಲಿರುವ ಕಾರ್ಮಿಕರು ಅಂದರೆ ಕೋಲಾರ ಗೋಲ್ಡ್ ಮೈನ್ಸ್‌ನಲ್ಲಿ ಕೆಲಸ ಮಾಡುವವರಲ್ಲಿ ಹೆಚ್ಚಿನವರು ಮೈನಾರಿಟೀಸ್ ಹಾಗೂ ಎಕರ್ ಸೆಕ್ಷನ್ ನವರು ಆಗಿರುತ್ತಾರೆ.ಆದ್ದರಿಂದ ಈ ೧೬ ಸಾವಿರ ಜನರ ಭಾರಿ ಪ್ರಶ್ನೆಯಾಗಿದೆ. ವಿದ್ಯುತ್ ಕೊಡದಿದ್ದರೆ ಆ ಕಾರ್ಖಾನೆಯನ್ನು ಮುಚ್ಚಲ್ಪಡುತ್ತದೆ. ಆದ್ದರಿಂದ ದಯವಾಡಿ ಮಂತ್ರಿಗಳು ಸ್ಪಷ್ಟವಾಗಿ ಉತ್ತರಿಸಬೇಕು. ವಿದ್ಯುತ್ತನ್ನು ಸರಬರಾಜು ಮಾಡುವುದನ್ನು ನಿಲ್ಲಿಸುವುದಿಲ್ಲ ಎಂಬ ಭರವಸೆಯನ್ನು ಕೊಡಬೇಕು, ಅದೇ ರೀತಿಯಲ್ಲಿ ಇನ್ನೊಂದು ಪ್ರಶ್ನೆ ಇದೆ,

ಅಧ್ಯಕ್ಷರು.—ಮಂತ್ರಿಗಳು ಪರಿಶೀಲನೆ ಮಾಡುತ್ತಾರೆ.

ಶ್ರೀ ಜೆ. ಎಸ್. ದೇಶ್‌ಮುಖ್.—ಕೋಲಾರದಲ್ಲಿರುವ ಕಾರ್ಖಾನೆಗೆ ೨೫ ಸೈಕಲ್ಸ್ ವಿದ್ಯುತ್ತನ್ನು ಕೊಡುತ್ತಿದ್ದೆವು. ಅವರು ೫೦ ಸೈಕಲ್ಸ್ ವಿದ್ಯುತ್‌ನ್ನು ಕೊಡಬೇಕು ಎಂದು ತಿಳಿಸಿದ್ದಾರೆ. ೫೦ ಸೈಕಲ್ಸ್ ಕೊಡಬೇಕು ಎಂದರೆ ಹಳೆಯ ಮೋಟಾರನ್ನು ಛೇಂಜ್ ಮಾಡಬೇಕಾಗುತ್ತದೆ. ಏನೇ ತೊಂದರೆ ಆದರೂ ವಿದ್ಯುತ್ ಪೂರೈಕೆಯನ್ನು ಮಾಡುವುದಕ್ಕೆ ಯೋಚನೆ ಮಾಡಿದ್ದೇವೆ. ೧೬ ಸಾವಿರ ಜನ ಇರತಕ್ಕಂಥ ಕಾರ್ಖಾನೆಯಲ್ಲಿ ವಿದ್ಯುತ್ ಪೂರೈಕೆಯನ್ನು ಮಾಡುವುದಿಲ್ಲ ಎಂಬ ಪ್ರಶ್ನೆಯೇ ಬರುವುದಿಲ್ಲ. ಆದನ್ನು ಸರಿಪಡಿಸುತ್ತೇನೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ಅವರ ಮಂಟ್ಪಿಗೆ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. ೫೦ ಸೈಕಲ್ಸ್ ಮಾಡುವಂಥ ಪ್ರಶ್ನೆ ಬಂದಲ್ಲಿ ಮಾಡದೇ ಬೇರೆ ಮಾರ್ಗ ಇಲ್ಲ. ಏತಕ್ಕೋಸ್ಕರ ನಾನು ಹೇಳುತ್ತಿದ್ದೇನೆಂದರೆ, ೨೫ ಸೈಕಲ್ಸ್‌ನ ಈ ಚರಿತ್ರೆ ಇವತ್ತಿನದಲ್ಲ. ನೂರಾರು ವರ್ಷದ ಚರಿತ್ರೆ. ೨೫ ಸೈಕಲ್ ವಿದ್ಯುತ್ ಉತ್ಪಾದನೆಯಾಗುತ್ತದೆ. ಈ ವಿದ್ಯುತ್ತನ್ನು ಭಾರತ್ ಗೋಲ್ಡ್ ಮೈನ್ಸ್ ಉಪಯೋಗಿಸಲು ಶಿವಸಮುದ್ರಂ ಜಲ ವಿದ್ಯುತ್ ಗಾರವನ್ನು ಮಾಡಲಾಗಿದೆ. ಆದ್ದರಿಂದ ಬೇರೆಯವರಿಗೆ ಇದರಿಂದ ವಿದ್ಯುತ್ ಕೊಡುವಂಥ ಪ್ರಶ್ನೆ ಬರುವುದಿಲ್ಲ. ಇದರಿಂದ ೫೦ ಸೈಕಲ್ಸ್ ಪರಿವರ್ತನೆ ಮಾಡುವಂಥ ಪ್ರಶ್ನೆಯೇ ಬರುವುದಿಲ್ಲ. ೫೦ ಸೈಕಲ್ಸ್ ಪರಿವರ್ತನೆ ಮಾಡಬೇಕು ಎಂಬ ಉತ್ತರವನ್ನು ತಾವು ಕೊಟ್ಟಿದ್ದೀರಿ. ತಮ್ಮ ಕಾಗದದಲ್ಲಿ ೫೦ ಸೈಕಲ್ಸ್ ಪ್ರಶ್ನೆಯೇ ಇಲ್ಲ ಭಾರತ ಗೋಲ್ಡ್ ಮೈನ್ಸ್‌ನವರಿಗೆ ಏನು ಕಾಗದ ಬರೆದಿದ್ದಾರೆ ಎಂದರೆ ಈ ವಿದ್ಯುತ್‌ಗಾರದಿಂದ ವಿದ್ಯುತ್ತನ್ನು ಇನ್ನು ಮುಂದಕ್ಕೆ ಕೊಡುವುದಕ್ಕೆ ಆಗುವುದಿಲ್ಲ ಎಂದು. ನಮಗೆ ಕಬಿನಿ ಹಾಗೂ ಇತರ ಜಲಾಶಯಗಳಿಂದ ನೀರನ್ನು ಡೈವರ್ಟ್ ಮಾಡಬೇಕಾಗುತ್ತದೆ. ನಾವು ಇದನ್ನು ಮುಚ್ಚುತ್ತೇವೆ. ಬೇರೆ ರೀತಿಯ ವ್ಯವಹಾರವನ್ನು ನೋಡಿಕೊಳ್ಳಬೇಕಾಗುತ್ತದೆ, ಎಂಬುದಾಗಿ ಅವರು ಹೇಳಿದ್ದಾರೆ. ಒಂದು ವೇಳೆ ಮುಚ್ಚಿದ ಪ್ರಶ್ನೆ ಬಂದರೆ ೧೬ ಸಾವಿರ ಕುಟುಂಬ ಇವತ್ತು ಬೀದಿ ಪಾಲಾಗುವ ಪ್ರಸಂಗ ಬರುತ್ತದೆ. ಆದ್ದರಿಂದ ದಯವಾಡಿ ಉತ್ತರ ಕೊಡಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ —ಈ ರೀತಿ ಕೇಳಿದರೆ ಉತ್ತರ ಹೇಳುವುದು ಕಷ್ಟವಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಅವರಿಗೆ ಅಕ್ಕಪಕ್ಕದವರು ಸ್ವಲ್ಪ ಟ್ರೈನಿಂಗ್ ಕೊಡಬೇಕು.

SRI N. M. ADYANTAYA.—In case the mines are force to close down the impact of this will be felt by the State Government too. Under the circumstances, if there is an instance of supplying power at 50Hz. to be converted into 25 Hz. operated in the Kolar Mines and the rasponsibility for this cannot be avoided by the Karnataka Government.

ಶ್ರೀ ಜೆ. ಎಸ್. ದೇಶ್‌ಮುಖ್.—ಆದನ್ನು ನೋಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಅಲ್ಲಿ ಕನ್‌ವರ್ಷನ್‌ಗೆ ೫೦ ಕೋಟಿ ರೂಪಾಯಿ ಆಗುತ್ತದೆ. ಇದನ್ನು ಕಂಟಿನ್ಯೂ ಮಾಡಿ ಎಂದು ಕೇಳುತ್ತೇನೆ.

ಅಧ್ಯಕ್ಷರು.—ನೀವು ಅರ್ಧ ಗಂಟೆ ಚರ್ಚೆಗೆ ಬರೆದು ಕಳಿಸಿರಿ

ಪ್ರಶ್ನೆ ಸಂಖ್ಯೆ. ೧೫೭೯ (ಆರ್ ವೆಂಕಟರಾಮಯ್ಯನವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ).

ಪ್ರಶ್ನೆ ಸಂಖ್ಯೆ.—೧೬೮೭

ಚಳ್ಳಕೆರೆ ತಾಲ್ಲೂಕಿನ ವರವುಕಾವಲಿನಲ್ಲಿ ಭೂರಹಿತರಿಗೆ ಭೂಮಂಜೂರಾತಿ

೧೬೮೭. ಶ್ರೀ ಪೂರ್ಣ ಮುತ್ತಪ್ಪ (ಮೊಳಕಾಲ್ಮೂರು).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಚಳ್ಳಕೆರೆ ತಾಲ್ಲೂಕಿನ ವರವು ಕಾವಲಿನಲ್ಲಿ ಭೂ ರಹಿತರಿಗೆ ಜಮೀನುಗಳನ್ನು ಮಂಜೂರಾಗಿ ಎಷ್ಟು ವರ್ಷಗಳಾಗಿವೆ ?

ಆ) ಮಂಜೂರಾದ ಕಾಲದಲ್ಲಿ ಕೆಲವಿನ್ನೂ ಸೈಟ್ಟಿನಂತೆ ನಂಬರುಗಳನ್ನು ಕೊಟ್ಟು ಹಕ್ಕು ಪತ್ರಗಳನ್ನು ಕೊಟ್ಟಿದ್ದು ಈಚೆಗೆ ಸರ್ವೆ ಇಲಾಖೆಯಿಂದ ಆಕಾರ ಬಂದು ದಿಂಡಸ್ತಾಗಿ ಬೇರೆ ಬೇರೆ ಸರ್ವೆ ನಂಬರುಗಳನ್ನು ಮಾಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?